ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಕ್ರಮ ದಾಸ್ತನು ಮಾಡಿರುವುದರ ಬಗ್ಗೆ ಕೇಂದ್ರ ಸರ್ಕಾರದ ಇತ್ತೀಚೆಗೆ ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ಸೂಚನೆಯನ್ನು ಕಳುಹಿಸಿದೆಯೇ ? ಕಳಿಸಿದ್ದರೆ ಅದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? Have you received communication from the Centre ?

SRI AZEEZ SAIT.—Yes I have received. We have already started raids even before receiving the communication by the Government of India. Even before communication from them, my Government initiated raids on such hoarders.

SRI M. MALLIKARJUNA KHARGE.—May I know in how many cases, the Government has raided and how many cases have been registered against hoarders and blackmarketeers ?

SRI AZEEZ SAIT.—The cases registered 349, persons arrested 340. These cases are peuding at various stages.

ನಿಪ್ಪಾಣಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಹೊಸ ಬಸ್ ಘಟಕ ನಿರ್ಮಾಣ.

೭೦೪. ಶ್ರೀ ಸುಭಾಶ್ ಜೋಶಿ (ನಿಪ್ಪಾಣಿ).—ಮಾನ್ಯ ರಾಜ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ನಿಪ್ಪಾಣಿಯಲ್ಲಿ ಕ.ರಾ.ರ.ಸಾ. ಸಂಸ್ಥೆಯ ಹೊಸ ಬಸ್ ಘಟಕವನ್ನು ಯಾವ ದಿನಾಂಕ ವಂಂಜೂರು ಮಾಡಲಾಯಿತು ?

(ಆ) ಹಾಗಿದ್ದರೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ರಾಜ್ಯ ಸಾರಿಗೆ ಸಚಿವರು).—

(ಅ) ವಂಂಜೂರು ಮಾಡಿರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.

SRI SUBHASH JOSHI.—Sir, Nipani is an entry point to Karnataka and the situation of Bus-stand and Depot at Nipani is very pitiable. I aequest the Hon. Minister to sanction this immediately and start the work.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಸ್ ಡಿಪೋ ವಿಚಾರವನ್ನು ಕೇಳಿದ್ದಾರೆ. ಅದರ ವಿಚಾರ ಪರಿಶೀಲನೆಯಲ್ಲಿ ಇಲ್ಲ ಎಂದು ಹೇಳಿದ್ದೇನೆ. ಆದರೆ ಬಸ್ ಸ್ಟ್ಯಾಂಡ್ ಬಗ್ಗೆ ಅವರು ಏನು ಹೇಳಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡಿ ಆದಷ್ಟು ಬೇಗನೆ ಮಾಡುತ್ತೇವೆ.

ಹಿಪ್ಪರಗಿ ಅಣೆಕಟ್ಟಿನ ಯೋಜನೆ

೧೧೫೩. ಶ್ರೀ ಎ. ಬಿ. ಜಮನೂರು (ಕಗ್ವಾಡ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಹಿಪ್ಪರಗಿ ಅಣೆಕಟ್ಟಿನ ಯೋಜನೆ "ಯೋಜನೆ ಆಡಿಯಲ್ಲಿ" ಸೇರಿಸಲಾಗಿದೆಯೇ ?

(ಆ) ಇದು ಈಗ ಯಾವ ಹಂತದಲ್ಲಿದೆ.

(ಇ) ಇದೂವರೆವಿಗೂ ಖರ್ಚು ಮಾಡಿರುವ ಹಣವೆಷ್ಟು ?

(ಈ) ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಹೆಚ್ಚಿನ ಹಣವನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಕೊಟ್ಟು ಕೃಷ್ಣಾ ನದಿಗೆ ನೀರು ಬಿಡಿಸಲಾಗುತ್ತಿರುವುದು ನಿಜವಲ್ಲವೇ ?

(ಉ) ಹಿಪ್ಪರಗಿ ಅಣೆಕಟ್ಟು ಅಡಿಯಲ್ಲಿ ಕೃಷ್ಣಾ ನದಿಯ ನೀರನ್ನು ಶೇಖರಣೆ ಮಾಡುವುದು ಜನಗಳ ಉಪಯೋಗಕ್ಕಾಗಿ ಅತ್ಯಗತ್ಯವೆಂಬುದು ಸರ್ಕಾರದ ಗಮನದಲ್ಲಿದೆಯೇ ?

(ಊ) ಈ ಯೋಜನೆಯ ಬ್ಯಾರೇಜ್ ಭಾಗವನ್ನು ತ್ವರಿತವಾಗಿ ಪೂರೈಸಲು ಸರ್ಕಾರವು ಏನೆಲ್ಲ ಕ್ರಮ ಕೈಗೊಂಡಿದ್ದಾರೆ ?

(ಋ) ಯೋಜನೆಯ ವರದಿಯ ಪ್ರಕಾರ ಈ ಆಣೆಕಟ್ಟಿನ ಅಡಿಯಲ್ಲಿ ನೀರನ್ನು ಸಂಗ್ರಹಿಸಲು ಬ್ಯಾರೇಜ್ ನಿರ್ಮಾಣ ಮಾಡಲಾಗುವ ಒಟ್ಟು ಹಣವೆಷ್ಟು ?

(ೠ) ಪ್ರಸ್ತುತ ಆಯವ್ಯಯ ವರ್ಷದಲ್ಲಿ ಸದರಿ ಆಣೆಕಟ್ಟಿನ ನಿರ್ಮಾಣಕ್ಕಾಗಿ ಒದಗಿಸಿರುವ ಹಣವೆಷ್ಟು ಹಾಗೂ ಈ ಯೋಜನೆಯನ್ನು ಪೂರ್ತಿಗೊಳಿಸಲು ಇನ್ನೂ ಎಷ್ಟು ವರ್ಷಗಳಾಗುವುವು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ಹೌದು.

(ಆ) ಎರಡು ಭಾಗಗಳ ಪ್ರವಾಹ ಒಡ್ಡಿನ ಕೆಲಸಗಳು ಭಾಗಶಃ ನಿರ್ಮಾಣ ಮಾಡಿರುವುದು ಹಾಗೂ ನದಿಯ ಪಾತ್ರದಲ್ಲಿ ಕೋಡಿ ತಳಪಾಯದ ಭಾಗದಲ್ಲಿ ಬೆಡ್ ಕಾಂಕ್ರೀಟ್ ಹಾಕಿರುವುದು.

(ಇ) ಮಾರ್ಚ್ ೧೯೬೦ರ ಅಂತ್ಯಕ್ಕೆ ಒಟ್ಟು ೫.೧೧ ಕೋಟಿ ರೂ.ಗಳಷ್ಟು ವ್ಯಯವಾಗಿದೆ.

(ಈ) ಹೌದು.

(ಉ) ಹೌದು.

(ಊ) ಹಣ ಸಂಪನ್ಮೂಲವನ್ನನುಸರಿಸಿ ಸಾಧ್ಯವಿರುವಷ್ಟು ಹಣ ಈ ಯೋಜನೆಗೆ ಒದಗಿಸಲಾಗಿದೆ. ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಆಣೆಕಟ್ಟಿನ ಬ್ಯಾರೇಜ್ ಭಾಗವನ್ನು ಪೂರ್ಣಗೊಳಿಸಲು ಉದ್ದೇಶವಿದೆ.

(ಋ) ೧೯೬೯–೭೦ನೇ ದರ ಪಟ್ಟಿಯ ಆಧಾರದ ಮೇಲೆ ಸುಮಾರು ೨೩ ಕೋಟಿ ರೂ.ಗಳು.

(ೠ) ಒಂದು ಕೋಟಿ ರೂ.ಗಳು ೯ನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಈ ಯೋಜನೆ ಪೂರ್ಣಗೊಳಿಸಬಹುದು.

† ಶ್ರೀ ಈರಪ್ಪ ಮಾರೆಪ್ಪ ಶೆಡಶ್ಯಾಳ (ಶ್ರೀ ಎ. ಬಿ. ಜಕನೂರ್ ಅವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಈ ಕೆಲಸ ಪ್ರಾರಂಭವಾದದ್ದು ೧೯೭೪ರಲ್ಲಿ. ಇಲ್ಲಿಯವರೆಗೆ ೧೬ ವರ್ಷಗಳು ಕಳೆದಿವೆ. ಆದರೆ ಉತ್ತರದಲ್ಲಿ ಎಂಟನೇ ಯೋಜನೆಯಲ್ಲಿ ಪ್ರಾರಂಭವಾಗಿದ್ದು ಒಂಭತ್ತನೇ ಯೋಜನೆಯಲ್ಲಿ ಮುಗಿಸುತ್ತೇವೆಂದು ಹೇಳಿದ್ದಾರೆ. ಈ ಕೆಲಸ ಪ್ರಾರಂಭವಾಗಿ ೧೬ ವರ್ಷಗಳಾಗಿದ್ದು ಈ ಕೆಲಸ ಬೇಗನೇ ಆಗುವುದು ಅವಶ್ಯಕ ಇದೆ. ಆದರೆ ಈ ವರ್ಷದ ಬಡ್ಜೆಟ್‌ನಲ್ಲಿ ಇದಕ್ಕೆ ಕೇವಲ ಒಂದು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಈ ಹಣವೆಲ್ಲಾ ಅಲ್ಲಿ ಸಿಬ್ಬಂದಿ ಖರ್ಚಿಗೆ ವ್ಯಯ ಆಗಲಿದ್ದು ಕೆಲಸ ಪ್ರಗತಿಯಾಗುವುದಿಲ್ಲ. ಈ ಯೋಜನೆ ಆ ಭಾಗದ ಜನರಿಗೆ ಅತಿ ಮುಖ್ಯವಾಗಿರುವುದರಿಂದ ಇದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಬೇಗನೆ ಪೂರ್ಣಗೊಳಿಸುತ್ತೀರಾ? ಸರ್ಕಾರ ೧೯೭೪ರಲ್ಲಿ ಸುಮಾರು ೩೦೦ ಎಕರೆ ಜಮೀನನ್ನು ಕಚ್ಚಾ ತೆಗೆದುಕೊಂಡು ೧೫೦ ಎಕರೆಯನ್ನು ಸ್ವಾಧೀನ ಪಡಿಸಿಕೊಂಡಿದೆ. ಮತ್ತೆ ಉಳಿದ ೧೫೦ ಎಕರೆ ಜಮೀನಿನ ಮಾಲೀಕರಿಗೆ ಪರಿಹಾರ ಧನವನ್ನು ಇನ್ನೂ ಕೊಡಾ ಕೊಟ್ಟಿಲ್ಲ. ಸರ್ಕಾರ ಈ ಬಗ್ಗೆ ಬೇಗನೆ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಜಿ ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ ಇದುವರೆಗೆ ಸುಮಾರು ೬ ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೆ ಈ ಒಂದು ಯೋಜನೆ ಪೂರ್ಣ ಪ್ರಮಾಣದಲ್ಲಿ ಆಗಬೇಕಾದರೆ ೨೩ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಇತ್ತೀಚಿನ ಅಂದರೆ ೧೯೬೯–೭೦ರ ಪರಿಷ್ಕೃತ ಯೋಜನೆ ತಯಾರಾಗಿದೆ. ಇಷ್ಟು ಭಾರಿ ಹಣವನ್ನು ಒದಗಿಸುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಕಷ್ಟ ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ಜೊತೆಗೆ ಇದರ ಬಗ್ಗೆ ಎನ್‌ವಿರೋನ್‌ಮೆಂಟಲ್ ಡಿಪಾರ್ಟ್‌ಮೆಂಟಲ್‌ನಿಂದ ಕ್ಲಿಯರೆನ್ಸ್ ಸಿಕ್ಕಿಲ್ಲ. ಈಗ ಅಲ್ಲಿ ಬ್ಯಾರೇಜ್ ಕಟ್ಟಿ ಅಲ್ಲಿಯ ನೀರನ್ನು ರೈತರಿಗೆ ಏತ ನೀರಾವರಿ ಮೂಲಕ ಕೊಡುವ ವಿಷಯ ಸರ್ಕಾರದ ಚಿಂತನೆಯಲ್ಲಿ ಇದೆ. ಅಷ್ಟು ಮಾಡುವುದಕ್ಕೆ ಕೂಡಾ ೫೫ ಕೋಟಿ ರೂಪಾಯಿಗಳು ಬೇಕಾಗುತ್ತದೆ, ಈ ಒಂದು ದಿಶೆಯಲ್ಲಿ ನಾವು ಈಗಾಗಲೇ ಅಂದಾಜನ್ನು ತಯಾರು ಮಾಡುತ್ತಿದ್ದೇವೆ. ಆದಷ್ಟು ಬೇಗ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.